

# ಮರೆಯಲಾದೀತೇ ಅಣ್ಣನ ಸಹಾಯವ?

ಅಪಾರವಾಗಿ ಪ್ರೀತಿಸುತ್ತಿದ್ದ ತಂದೆ ಕಾಲವಾದ ನಂತರ ಬದುಕುವ ಉತ್ಸಾಹವನ್ನೇ ಕಳೆದುಕೊಂಡ ನನಗೆ ಜೀವನ ಸ್ಫೂರ್ತಿಯನ್ನು ತುಂಬಿ ಹೊಸ ಬಾಳು ಕಟ್ಟಿಕೊಳ್ಳಲು ಶ್ರಮಿಸಿದವನು ನನ್ನ ಅಣ್ಣ. ಹಾಲಿನ ಕಡಲಿನಂಥ ಪ್ರೀತಿ ಹರಿಸುವ ಅಣ್ಣನ ಈ ಪರಿಯನ್ನು ಮರೆಯುವುದೆಂತು?

★ಶೋಭಾ ಎಸ್. ಗಾಣಿಗೇರ

ಆಗ ನಾನು ಇನ್ನೂ ಪಿ.ಯು.ಸಿ. ದ್ವಿತೀಯ ವರ್ಷ ವಿದ್ಯಾರ್ಥಿನಿ. ನಾನು ಅಪಾರವಾಗಿ ಪ್ರೀತಿಸುತ್ತಿದ್ದ ಅಪ್ಪ ನನ್ನನ್ನು ಬಿಟ್ಟು ಹೋದರು. ತಂದೆಯ ಸಾವು ನನ್ನ ಬದುಕುವ ಉತ್ಸಾಹವನ್ನೇ ಅಳಿಸಿಹಾಕಿತ್ತು. ಕೆಲವು ವರ್ಷ ನಾನು ನಗುವುದನ್ನೇ ಮರೆತಿದ್ದೆ. ಜೀವನದಲ್ಲಿ ಜಿಗುಪ್ಸೆ, ನಿರುತ್ಸಾಹ, ನಿರಾಶೆ, ತುಂಬಿ ನಾನು ಒಮ್ಮೆ ಸಾಯಲೂ ಮುಂದಾಗಿದ್ದೆ. ಆದರೆ ತಂದೆ ತಾಯಿ ಎರಡೂ ಆಗಿ ಸಾಂತ್ವನ, ಸಮಾಧಾನ ಹೇಳಿದ್ದು ನನ್ನ ಅಣ್ಣ.

ತಾಯಿ, ಅಣ್ಣಂದಿರ ಆಶೀರ್ವಾದದಿಂದ ನಾನು ಮೊದಲಿನಂತೆ ನಗು–ನಗುತ್ತಾ ಬದುಕುವುದನ್ನು ಕಲಿತೆ. ಮನೆಯವರ ಜತೆ ನೆಮ್ಮದಿಯಾಗಿ ಕಾಲ ಕಳೆಯುತ್ತಾ ಬಂದೆ. ನನ್ನ ಮನಸ್ಥಿತಿ ಅರಿತ ಅಣ್ಣ ನನ್ನ ಜೀವನದುದ್ದಕ್ಕೂ ಹೆಗಲಾಗಿ ನಿಂತ. ನನ್ನ ಮದುವೆಯ ವಿಷಯದಲ್ಲೂ ಮುಂದೆ ನಿಂತು ಸಹಕರಿಸಿದ. ಒಬ್ಬ ಒಳ್ಳೆಯ ಹುಡುಗನನ್ನು ತೋರಿಸಿ 'ಇವನನ್ನು ಮದುವೆಗೆ ಒಪ್ಪು' ಎಂದು ಹೇಳಿದ. ಆದರೆ ಮದುವೆಯ ಉತ್ಸಾಹ ನನ್ನಲ್ಲಿರಲಿಲ್ಲ. ಆಗ ಅಣ್ಣ 'ಮುಂದೆ ನಾನೂ ಇಲ್ಲದಾದಾಗ ಯಾರೂ ನಿನ್ನ ಬದುಕಿಗೆ ದಿಕ್ಕು ಇರಲಾರರು' ಎಂಬ ಕಟುಸತ್ಯವನ್ನು ಹೇಳಿ ನನ್ನ ಬಾಳಿಗೆ ಹಾದಿ ಮಾಡಿಕೊಟ್ಟ.

ವರನ ಮುಖ ನೋಡದೇ ನನ್ನ ಅಣ್ಣ ಏನೇ ಮಾಡಿದರೂ ಒಳ್ಳೆಯದೇ ಎಂದು ಒಪ್ಪಿದೆ. ಅಂದು ಮದುವೆ ದಿನ ನನ್ನ ಜೀವನದ ದಿಕ್ಕು ಬದಲಿಸಿದ ದಿನ. ವೇದಿಕೆ ಮೇಲೆ ಗಂಡನ ಪಕ್ಕ ನಾನು ಕುಳಿತಿದ್ದೆ. ಎಲ್ಲ ಸ್ನೇಹಿತರು, ಹಿರಿಯರು ಊರಿನ ಜನ ಆಶೀರ್ವದಿಸಿದರು. ಆಗ ನನ್ನ ಅಣ್ಣ ಬಂದ. ಪ್ರೀತಿಯಿಂದ ನಮಸ್ಕರಿಸಿದೆ. ಆತ ಮನಪೂರ್ವಕ ಆಶೀರ್ವದಿಸಿದ. ಆ ಕ್ಷಣ ನನಗೆ ಅಳಬೇಕೊ ನಗಬೇಕೊ ಎಂದು ತಿಳಿಯಲಿಲ್ಲ. ಮನತುಂಬಿ ಬಂದಿತ್ತು. ಅಣ್ಣನ ಮುಖದಲ್ಲಿ, ಏನೋ ಉತ್ಸಾಹ, ಸಂತೋಷ, ಜೀವನವನ್ನೇ ಗೆದ್ದೆ ಎಂಬ ಭಾವನೆ. ಅದನ್ನು ಕಂಡು ನಾನು ಅಂದಿನಿಂದ ನಗುವುದನ್ನು ಕಲಿತೆ. ತವರುಮನೆ ಮತ್ತು ಅಣ್ಣಂದಿರಿಂದ ದೂರ ಹೋಗುವೆ ಎಂಬ ಅಳು. ಆದರೆ ತನ್ನ ಸಹೋದರಿಯ ಜೀವನದಲ್ಲಿ ಹೊಸ ಅಲೆ ಬಂತು, ತಂದೆಯ ಕರ್ತವ್ಯ ನಿಭಾಯಿಸಿದೆ ಎಂಬ ಅಣ್ಣನ ಸಂತೋಷ ತಿಳಿದು ಖುಷಿಯಾಯಿತು.

ತಂದೆಯ ಸಾವಿನಿಂದ ದಿಕ್ಕಟ್ಟ ನನ್ನ ಬದುಕಿಗೆ ದಾರಿ ತೋರಿಸಿದ ಅಣ್ಣ ತನ್ನ ಜವಾಬ್ದಾರಿ ನಿಭಾಯಿಸಿದ್ದ. ತಂದೆ ಇಲ್ಲ ಎಂಬ ಕೊರತೆ ತುಂಬಿದ ಆ ಅಣ್ಣ ಹಾಗೂ ತಾಯಿಗಾಗಿ ಬದುಕಬೇಕು ಎಂದು ಮನಸ್ಸನ್ನು ಗಟ್ಟಿ ಮಾಡಿಕೊಂಡೆ. ನಾವು 'ನಮಗಾಗಿ ಅಲ್ಲ; ನಮ್ಮನ್ನು ಪ್ರೀತಿಸುವವರಿಗಾಗಿ ಬದುಕಬೇಕು' ಎಂಬ ಪಾಠ ಕಲಿಸಿದ ಅಣ್ಣ.

ಇವತ್ತೂ ನಾನು ತವರು ಮನೆ ಎಂಬ ಅರಮನೆಗೆ ಹೋದಾಗ ನನಗೆ ಪ್ರೀತಿಯ ಮಹಾಪೂರವೇ ಸಿಗುತ್ತದೆ. ತಂದೆಯನ್ನು ಕಳೆದುಕೊಂಡ ನೋವನ್ನು ಮರೆಸಿ ಜೀವನದಲ್ಲಿ ಹೊಸ ಚೈತನ್ಯ ಮೂಡಿಸಿದ ಅಣ್ಣನಿಗೆ ಒಂದು ಹ್ಯಾಟ್ಸ್ ಆಫ್. ಮದುವೆಯ ದಿನದ ಸವಿನೆನಪನ್ನು ಅಂತೂ ಮರೆಯುವ ಹಾಗೆ ಇಲ್ಲ. ಜೀವನದ ಎಲ್ಲ ನೆನಪುಗಳನ್ನು ಮೀರಿದ್ದು ಅದು.

ಆ ಪ್ರೀತಿ, ಕಾಳಜಿಯ ನೆನಪಿನ ಮುಂದೆ, ಉಳಿದ ಎಲ್ಲವೂ ಗೌಣ. ಆ ಅಮೂಲ್ಯ ನೆನಪು ಕೋಟಿಗಿಂತಲೂ ಮಿಗಿಲು. ಜನ್ಮಜನ್ಮಾಂತರಕ್ಕೂ ಅಣ್ಣನ ಸಹಾಯ, ಆಶಯ, ಪ್ರೀತಿ, ಸಹಕಾರ ಎಲ್ಲವನ್ನೂ ಮರೆಯಲಾರೆ.

**ನೀವೂ ಬರೆಯಿರಿ**

*ಸವಿ ಸವಿ ನೆನಪು..*

*ಈ ಅಂಕಣಕ್ಕೆ ಕಳುಹಿಸುವ ಬರಹ 400 ಶಬ್ದಗಳಿರಲಿ. ಹಳೆಯ ಮಧುರ ನೆನಪುಗಳನ್ನು ಕೆದಕಿ ಅದಕ್ಕೊಂದು ಸ್ಪಷ್ಟ ರೂಪ ಕೊಡಿ. ಚಿತ್ರಗಳು ಉತ್ತಮ ಗುಣಮಟ್ಟದ್ದಾಗಿರಬೇಕು. ನಿಮ್ಮ ಹೆಸರು, ವಿಳಾಸ, ಫೋನ್ ನಂಬರ್ ಸ್ಪಷ್ಟವಾಗಿ ಬರೆಯಿರಿ.*